ಅಧ್ಯಕ್ಷರು.—ದಯವಿಟ್ಟು ತಾವು ಕುಳಿತುಕೊಳ್ಳಬೇಕು. ಮಾನ್ಯ ಮಂತ್ರಿಯವರು ಮಾತನಾಡಲು ಎದ್ದಾಗ, ಹೀಗೆ ತಾವುಗಳು ಮಾತನಾಡಬಾರದು.

(ಗೊಂದಲ)

ಅಧ್ಯಕ್ಷರು.—ಮಾನ್ಯ ಮಂತ್ರಿಗಳವರಿಗೆ ಮಾತನಾಡಲು ನಾವು ಅವಕಾಶ ಕೊಟ್ಟಿದ್ದೇವೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಸದಸ್ಯರಾದ ತುಂಗಳ್‌ರವರು ಬೆಳಗಾಂ ನಗರ ಸಭೆಯ ಮೇಲೆ ಭಗವಾನ್ ಜಂಡಾವನ್ನು ಹಾರಿಸಂತ್ತಿರುವುದರ ಬಗ್ಗೆ ತಮ್ಮ ಕಳವಳ, ಆತಂಕವನ್ನು ವ್ಯಕ್ತ ಮಾಡಿದ್ದಾರೆ. ಕಳೆದ ಸುಮಾರು ೨೦ ವರ್ಷಗಳಿಂದ ಭಗವಾನ್ ಜೆಂಡಾವನ್ನು ಅಲ್ಲಿ ಹಾಕಿರತಕ್ಕಂತಹ ವಿಚಾರ ಇದೆ. ಹಿಂದೆ ಇದ್ದ ಸರಕಾರಗಳು ಈ ಬಗ್ಗೆ ಆಲೋಚನೆ ಮಾಡಬೇಕಾಗಿತ್ತು. ಆದರೂ ಕೂಡ ಈ ಬಗ್ಗೆ ನಾವು ಸೂಕ್ತವಾಗಿ, ಗಂಭೀರವಾಗಿ ಆಲೋಚನೆ ಮಾಡಿ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್.—ಮನೆಗಳ ಮೇಲೆ, ಖಾಸಗಿ ಕಟ್ಟಡಗಳ ಮೇಲೆ ಬೇಕಾದರೆ ಇಂತಹ ಧ್ವಜಗಳನ್ನು ಹಾರಾಡಿಸಿದರೆ ಅದು ಬೇರೆ ವಿಚಾರ. ಸರಕಾರಿ ಕಚೇರಿ ಕಟ್ಟಡಗಳ ಮೇಲೆ ಹಾರಿಸಿದರೆ ಅದನ್ನು ಒಪ್ಪಿಕೊಳ್ಳಲಿಕ್ಕೆ ಆಗುತ್ತದೆಯೇ ?

ಅಧ್ಯಕ್ಷರು.— ಈಗ ಶ್ರೀ ಡಿ. ಟಿ. ಜಯಕುಮಾರ್‌ರವರ ಗಮನ ಸೆಳೆಯುವ ಸೂಚನೆ ಕ್ರಮಾಂಕ ೨೦೪.

IV ನಂಜನಗೂಡು ತಾಲ್ಲೂಕಿನಲ್ಲಿ ಕಾಡಾನೆಗಳ ಹಾವಳಿಯನ್ನು ತಪ್ಪಿಸುವುದು

ಶ್ರೀ ಡಿ. ಟಿ. ಜಯಕುಮಾರ್.—ನಂಜನಗೂಡು ತಾಲ್ಲೂಕಿನಲ್ಲಿ ಕಾಡಾನೆಗಳ ಹಾವಳಿಯಿಂದ ಬೆಳೆಗಳು ನಾಶವಾಗುತ್ತಿರುವ ಬಗ್ಗೆ ನಾನು ಅರಣ್ಯ ಸಚಿವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಬಿ. ಎ. ಜೀವಿಜಯ (ಅರಣ್ಯ ರಾಜ್ಯ ಸಚಿವರು).—

ನಂಜನಗೂಡು ತಾಲ್ಲೂಕಿನ ಬೇಗೂರು, ಹೆಡಿಯಾಲ ಸುತ್ತಮುತ್ತಲ ಹಳ್ಳಿಗಳಲ್ಲಿ ಬೆಳೆಗಳಿಗೆ ಆಗುತ್ತಿರುವ ಕಾಡಾನೆಗಳ ಹಾವಳಿಯನ್ನು ತಪ್ಪಿಸಲು ಮತ್ತು ಕಾಡಾನೆಗಳನ್ನು ಅರಣ್ಯದಲ್ಲೇ ಸೀಮಿತಗೊಳಿಸಲು ಸುಮಾರು ೧೧.೮೮ ಮಿ. ಉದ್ದದ ಕಂದಕವನ್ನು ತೆಗೆಸಲಾಗಿದೆ. ಈ ಕೆಲಸವನ್ನು ಮುಂದುವರಿಸಲು ಕಾರ್ಯಕ್ರಮವೊಂದನ್ನು ಹಾಕಿಕೊಳ್ಳಲಾಗಿದೆ. ೩೦ ಜನ ಅರಣ್ಯ ವೀಕ್ಷಕರನ್ನು ಕಾಡಾನೆಗಳನ್ನು ಓಡಿಸಲು ನೇಮಿಸಲಾಗಿದೆ ಮತ್ತು ಅವರಿಗೆ ಬಂದೂಕುಗಳನ್ನು ಮತ್ತು ಪಂದ್ಯು ಗುಂಡುಗಳನ್ನು ಕೊಡಲಾಗಿದೆ.

ಸಂಬಂದಪಟ್ಟವರಿಂದ ಬೆಳೆ ಪರಿಹಾರಕ್ಕೆ ಬೇಕಾದ ಪರಿಹಾರವನ್ನು ಕೂಡಲೇ ಕೊಡಲಾಗುತ್ತಿದೆ.

ಶ್ರೀ ಡಿ. ಟಿ. ಜಯಕುಮಾರ್.—ಅಧ್ಯಕ್ಷರೆ, ಲಕ್ಷಾಂತರ ರೂಪಾಯಿಗಳನ್ನು ಖರ್ಚು ಮಾಡಿ ಕಾಡಾನೆಗಳ ಹಾವಳಿಯನ್ನು ತಪ್ಪಿಸಲು ಈ ಕಂದಕಗಳನ್ನು ತೋಡಿದ್ದಾರೆ. ೧೧.೮೮ ಕಿ.ಮಿ. ಕಂದಕವನ್ನು ತೆಗೆಸಲಾಗಿದೆ ಎಂದು ಹೇಳಿದ್ದಾರೆ. ಈ ಕಂದಕವನ್ನು ಇವೊತ್ತೇ ಹೋಗಿ ಮಾನ್ಯ ಸಚಿವರು ನೋಡಲಿ. ಇಲಾಖೆಯ ಅಧಿಕಾರಿಗಳು ಹೇಗೆ ಕೆಲಸ ಮಾಡಿಸಿದ್ದಾರೆ ಎಂದು ತಿಳಿದುಕೊಳ್ಳಬಹುದು ಈ ಕಂದಕದಲ್ಲಿ ಕುರಿ, ಆಡು, ದನಕರುಗಳು ಕೂಡಾ ಹಾದು ಹೋಗಬಹುದಾಗಿದೆ. ಇಂತಹ ಕಂದಕಗಳನ್ನು ಆನೆಗಳು ದಾಟುವುದು ಕಷ್ಟವೆ ? ಅವುಗಳೂ ದಾಟಿ ಹೋಗುತ್ತವೆ. ಆದುದರಿಂದ ಇಂತಹ ಕಂದಕಗಳನ್ನು ತೋಡಿಸುವುದರಿಂದ ಏನೂ ಪ್ರಯೋಜನ ಇಲ್ಲ. ಈಗ ನಾನು ಒಂದು ಸಲಹೆಯನ್ನು ಕೊಡುವುದಕ್ಕೆ ಇಷ್ಟಪಡುತ್ತೇನೆ. ಏನೆಂದರೆ ಅಲ್ಲಿನ ಸುತ್ತಮುತ್ತಲಿನ ಗ್ರಾಮಸ್ಥರನ್ನು ಕೆಲವರನ್ನು ಅಪ್ಪಾಯಿಂಟ್ ಮಾಡಿಕೊಂಡು ವಾಚ್ ಎಂಡ್ ವಾರ್ಡ್ ಹೆಚ್ಚಿಗೆ ಬಿಗಿ ಮಾಡಿದರೆ ಇಂತಹ ಕಡೆ ಇಂತಹ ಆನೆ ಬರುತ್ತದೆ ಎಂದು ಅವರಿಗೆ ಸ್ವಲ್ಪ ತಿಳುವಳಿಕೆ ಕೊಟ್ಟರೆ ಅವರು ನೋಡಿಕೊಳ್ಳುತ್ತಾರೆ. ಇದರ ಮೂಲಕ ಬೆಳೆಗಳಿಗೆ ಆಗತಕ್ಕಂತಹ ನಷ್ಟವನ್ನು ಹತೋಟಿಗೆ ತರಬಹುದು ಎಂದು ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಬಿ.ಎ.ಜೀವಿಜಯ.—ಮಾನ್ಯ ಸದಸ್ಯರು ಗ್ರಾಮಸ್ಥರನ್ನು ಈ ಕೆಲಸಕ್ಕೆತೆಗೆದುಕೊಳ್ಳಬೇಕೆಂದು ಸಲಹೆಯನ್ನು ಮಾಡಿದ್ದಾರೆ. ಅದು ಸ್ವಲ್ಪ ಕಷ್ಟವಾಗುತ್ತದೆ. ಯಾರಿಗೆ ಆದರೂ ಆನೆಗಳು ಯಾವಾಗ ಬರುತ್ತವೆ ಯಾವಾಗ ಹೋಗುತ್ತವೆ ಎಂದು ಹೇಳುವುದಕ್ಕಾಗುವುದಿಲ್ಲ. ನಾವು ಕಂದಕಗಳನ್ನು ತೋಡಿದ್ದರೂ ಕೂಡ, ಕೆಲವುಕಡೆಗಳಲ್ಲಿ ಗ್ರಾಮಸ್ಥರು ಮುಚ್ಚಿ ಹಾಕಿದ್ದಾರೆ. ಏಕೆಂದರೆ ಅವರ ದನ ಕರುಗಳನ್ನು ಅರಣ್ಯಕ್ಕೆ ಬಿಡಲಿಕ್ಕೋಸ್ಕರ ಅನುಕೂಲವಾಗಲೆಂದು ಇದು ನಪ್ಪುದೊಡ್ಡ ಯೋಜನೆ. ಇದನ್ನು ನಾವು ಕೇಂದ್ರ ಸರಕಾರಕ್ಕೆ ಕಳುಹಿಸಿದ್ದೇವೆ. ೪೦೦ ಲಕ್ಷ ರೂಪಾಯಿಗಳ ಒಂದು ಯೋಜನೆ, ಇದು ಮಂಜೂರು ಆಗಿ ಬಂದರೆ, ಪ್ರತಿಯೊಂದು ಕಡೆಗಳಲ್ಲಿಯೂ ೫ ಕಿ.ಮೀ. ಕಂದಕಗಳನ್ನು ತೋಡಲಿಕ್ಕೆ ಪ್ರಯತ್ನ ಮಾಡುತ್ತೇವೆ. ಒಂದು ಕಿ.ಮೀ. ಗೆ ೨೫ ಸಾವಿರ ರೂಪಾಯಿಗಳ ವೆಚ್ಚದಲ್ಲಿ ಈ ಕೆಲಸವನ್ನು ನಾವು ಮಾಡಲಿಕ್ಕೆ ಪ್ರಯತ್ನವನ್ನು ಮಾಡುತ್ತಾ ಇದ್ದೇವೆ. ಮತ್ತು ಬಂಡೀಪುರದ ಹತ್ತಿರ ಆನೆಗಳ ಕಾಟ ಹೆಚ್ಚಿಗೆ ಆಗಿರತಕ್ಕಂಥಾದ್ದು ಇದೆ. ಇವು ಅರಣ್ಯವನ್ನು ಕೂಡ ಸ್ವಲ್ಪ ನುಟ್ಟಿಗೆ ನಾಶ ಮಾಡುತ್ತಾ ಇವೆ. ವಿಶೇಷವಾಗಿ ವಂಜನಗೂಡಿಗೆ ಆನೆಗಳು ಹೋಗತ್ತಾ ಇವೆ. ಅಲ್ಲಿ ಇನ್ನೊಂದು ಹೊಸ ಯೋಜನೆಯನ್ನು ನಾವು ಹಾಕಿಕೊಂಡಿದ್ದೇವೆ. ಈ ಕೆಲಸಕ್ಕೆ ಎಲಿಕ್ಟ್ರಿಕ್ ತಂತಿಗಳನ್ನು ಬಳಸುವ ಕಾರ್ಯಕ್ರಮ ಇದೆ. ಆದರ ಸಾಧ್ಯಾಸಾಧ್ಯತೆಗಳನ್ನು ನೋಡಿಕೊಂಡು ಪರಿಶೀಲನೆ ಮಾಡಿ ಆದಷ್ಟು ಜಾಗ್ರತಕತೆ ಈ ಕೆಲಸ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಡಿ. ಟಿ. ಜಯಕುಮಾರ್.—ಈ ಗಮನ ಸೆಳೆಯುವ ಸೂಚನೆಯನ್ನು ಕೊಟ್ಟು ೧೫ ದಿವಸಗಳು ಆಗಿವೆ. ಇಷ್ಟರೊಳಗೆ ಅಲ್ಲಿ ಒಂದು ಆನೆ ಒಬ್ಬನನ್ನು ಸಾಯಿಸಿದೆ. ಇನ್ನೊಬ್ಬನು ತಂಳಿತಕ್ಕೆ ಒಳಗಾಗಿ ಕೆ.ಆರ್. ಆಸ್ಪತ್ರೆಯಲ್ಲಿ ಶುಶ್ರೂಷೆಯನ್ನು ಪಡೆಯುತ್ತಿದ್ದಾನೆ. ಜೊತೆಗೆ ಇಲಾಖೆಯವರು ಪರಿಹಾರ ಏನೂ ಕೊಡುತ್ತಿದ್ದಾರೆ, ಕೊಡುವಾಗ ಈ ಅಧಿಕಾರಿಗಳಿಗೆ ರೈತರು ಎಂದರೆ ಏನೋ ಒಂದು ರೀತಿಯ ವೈರತ್ವದ ಭಾವನೆಯನ್ನು ತೋರಿಸುತ್ತಾರೆ. ಪಾನಿಗೊಳಗಾದವರು ಯಾರದಾರೂ ಇವರ ಹತ್ತಿರ ಬಂದು ತಮ್ಮ ಕಷ್ಟವನ್ನು ಹೇಳಿಕೊಂಡರೆ ಬೆಳಿಗ್ಗೆ ನಷ್ಟವಾಗಿದೆ ಎಂದು ಹೇಳಿಕೊಂಡರೆ, ಅವರು ಸಕಾಲದಲ್ಲಿ ಬಂದು ಮಹಜರ್ ಮಾಡುವುದಿಲ್ಲ. ಆಕಸ್ಮತ್ತಾಗಿ ಬಂದರೂ ಕೂಡ ಕಾಟಾಚರಕ್ಕೆ ೧೦ ಸಾವಿರ ರೂಪಾಯಿಗಳ ನಷ್ಟಕ್ಕೆ ೧-೨ ಸಾವಿರ ಎಂದು ಬರೆದುಕೊಂಡು ಬಿಡುತ್ತಾರೆ. ಜೊತೆಗೆ ಪರಿಹಾರ ಕೊಡುವುದಕ್ಕೆ ೬ ತಿಂಗಳು, ವರ್ಷಗಟ್ಟಲೆ ಕಾಯಬೇಕಾಗುತ್ತದೆ. ಈ ವಿಚಾರದಲ್ಲಿ ಮಾನ್ಯ ಸಚಿವರು ಹೆಚ್ಚಿಗೆ ಆಸಕ್ತಿಯನ್ನು ವಹಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಬಿ. ಎ. ಜೀವಿಜಯ.—ಮಾನ್ಯ ಸದಸ್ಯರ ಸೂಚನೆಯನ್ನು ಒಪ್ಪಿಕೊಳ್ಳುತ್ತೇನೆ.

ನಿಯಮ ೩೫೪ರ ಮೇರೆಗೆ

ಅಧ್ಯಕ್ಷರು.—ಈಗ ನಿಯಮ ೩೫೪ ರ ಮೇರೆಗೆ

ಬೀಳಗಿಯ ಘಟಪ್ರಭಾ ಎಡದಂಡೆಯ ಕಾಲುವೆ ವಿಭಾಗದ ಕಛೇರಿಗೆ ಕಾರ್ಯನಿರ್ವಾಹಕ ಅಭಿಯಂತರರನ್ನು ಇಲ್ಲವೆ ನೇಮಿಸುವುದು.

ಶ್ರೀ ಬಾಬುರೆಡ್ಡಿ ವಿ. ತುಂಗಳ್.—ನನ್ನ ಕ್ಷೇತ್ರವಾದ ಬೀಳಗಿಯಲ್ಲಿ ಘಟಪ್ರಭ ಎಡದಂಡೆ ಕಾಲುವೆಯ ಒಂದು ವಿಭಾಗ ಕಛೇರಿ ಇದೆ. ಇದರ ಕಾರ್ಯವ್ಯಾಪ್ತಿಯಲ್ಲಿ ಮುಧೋಳ್, ಬೀಳಗಿ, ಎಡಹಳ್ಳಿ, ಕಾತರಕಿ, ಹೀಗೆ ನಾಲ್ಕು ಉಪವಿಭಾಗಗಳು ಇವೆ. ಬೀಳಗಿ ವಿಭಾಗಕ್ಕೆ ಒಬ್ಬ ಕಾರ್ಯನಿರ್ವಾಹಕ ಅಭಿಯಂತರರು ಇದ್ದು, ಇವರು ನೀರಾವರಿಯ ಕೆಲಸ ಕಾರ್ಯಗಳನ್ನು ನೋಡಿಕೊಳ್ಳಬೇಕಾಗುತ್ತದೆ.

ದುರ್ದೈವದ ಸಂಗತಿಯೆಂದರೆ ೧೧ ತಿಂಗಳಿಂದ ಬೀಳಗಿ ವಿಭಾಗಕ್ಕೆ ಒಬ್ಬ ಕಾರ್ಯನಿವಾಹಕ ಅಭಿಯಂತರು ಇಲ್ಲ. ಹೀಗಾಗಿ ಬೀಳಗಿ ವಿಭಾಗದ ನೀರಾವರಿ ಕಾರ್ಯಗಳಿಗೆ ಮತ್ತು ನೀರಾವರಿಗೆ ಸಂಬಂಧಪಟ್ಟ ಅಭಿವೃದ್ಧಿ ಕಾರ್ಯಗಳಿಗೆ ಅತ್ಯಂತ ತೊಂದರೆಯಾಗಿದೆ. ಬೀಳಗಿಯು ಜಿ.ಎಲ್.ಜಿ.ಸಿ. ಯ ಕೊನೆಯ ಎಂದರೆ ಟೇಲೆಂಡ್ ಭಾಗವೆಂದು ಪರಿಗಣಿಸಲ್ಪಟ್ಟಿದ್ದರ್ದ, ಇಲ್ಲಿ ದೀರ್ಘಕಾಲ ಒಬ್ಬ ಕಾರ್ಯನಿರ್ವಾಹಕ ಅಭಿಯಂತರರು ಇರದೆ ಇರುವುದು ಅನೇಕ ತೊಂದರೆಗಳಿಗೆ ದಾರಿ ಮಾಡಿಕೊಟ್ಟಿದೆ.